# ರಸಬೋಧೆ

ಸ್ವಾಮಿ ಭೂತೇಶಾನಂದ
ಸಂಕಲನ : ಸ್ವಾಮಿ ಋತಾನಂದ
ಅನುವಾದ : ಸ್ವಾಮಿ ಮಂಗಳಾತ್ಮಾನಂದ



**ಒ**ಬ್ಬ ತಂದೆ ತನ್ನಿಬ್ಬರು ಮಕ್ಕಳಿಗೆ ಮನೆಪಾಠ ಹೇಳಿಕೊಡಲು ಒಬ್ಬ ಮಾಸ್ಟರನ್ನು ಇಟ್ಟುಕೊಂಡಿದ್ದ. ಹುಡುಗರಿಗೆ ವಿದ್ಯೆ ಕಲಿಯಲು ಮನಸ್ಸೇ ಇಲ್ಲ. ಮಾಸ್ಟರಿಗೆ ವಿದ್ಯೆ ಕಲಿಸಲು ಸಾಧ್ಯವಾಗುತ್ತಿಲ್ಲವೆಂದು, ತಂದೆ ಇನ್ನೊಬ್ಬನನ್ನು ನೇಮಿಸಿದ. ಆ ಮಾಸ್ಟರೂ ತನಗೆ ಈ ಕೆಲಸ ಸಾಧ್ಯವಿಲ್ಲವೆಂದು ಬಿಟ್ಟುಹೋದ. ತಂದೆ ಮತ್ತೊಬ್ಬನನ್ನು ನೇಮಿಸಿದ. ಅವನಿಂದಲೂ ಹುಡುಗರಿಗೆ ಪಾಠ ಕಲಿಸಲು ಸಾಧ್ಯವಾಗಲೇ ಇಲ್ಲ. ಇನ್ನೇನು ಮಾಡುವುದು? ಸರಿ, ಮಕ್ಕಳನ್ನು ವಾಯುಸಂಚಾರಕ್ಕೆ ಕರೆದುಕೊಂಡು ಹೋದ. ದಾರಿಯಲ್ಲಿ ಒಂದು ಹಣ್ಣಿನ ಅಂಗಡಿ ಇತ್ತು. ಕಿತ್ತಳೆ ಹಣ್ಣನ್ನು ಎತ್ತಿಹಿಡಿದು, "ಇದು ಯಾವ ಹಣ್ಣು?" ಎಂದು ದೊಡ್ಡ ಹುಡುಗನನ್ನು ಕೇಳಿದ. ತಕ್ಷಣ ಚಿಕ್ಕ ಹುಡುಗ ತನ್ನ ಅಣ್ಣನನ್ನು ಎಚ್ಚರಿಸಿದ, "ಅಣ್ಣಾ, ಹುಷಾರ್. ಹೇಳಬೇಡ. ಮಾಸ್ಟರ್ ನಮಗೆ 'ಕ' ಎಂಬ ಅಕ್ಷರ ಹೇಳಿಕೊಡಲು ಹೊರಟಿದ್ದಾರೆ."

ಹೀಗೇ ಕಾಲ ಕಳೆಯಿತು. ಅಣ್ಣತಮ್ಮಂದಿರಿಬ್ಬರೂ ಹೇಗಾದರೂ ಮಾಡಿ ಈ ಮಾಸ್ಟರನ್ನೂ ಓಡಿಸಲು ಉಪಾಯ ಮಾಡುತ್ತಿದ್ದರು. ಇನ್ನೊಂದು ದಿನ ಅಣ್ಣ ಹೇಳಿದ, "ಅಲ್ಲಾ ಕಣೋ, ಈ ಮಾಸ್ಟರ್ ಸತ್ತುಹೋದರೆ ನಾವು ಪಾರಾಗಬಹುದು!" ಅದಕ್ಕೆ ಒಡನೆ ಚಿಕ್ಕವನು ಉತ್ತರ ಕೊಟ್ಟ : "ಛೇ, ನಿನಗೆ ಬುದ್ಧಿ ಇದೆಯೇನೋ? ಈ ಮಾಸ್ಟರ್ ಸತ್ತರೆ ನಮ್ಮ ಅಪ್ಪ ಇನ್ನೊಬ್ಬ ಮಾಸ್ಟರನ್ನು ನೇಮಿಸುತ್ತಾರೆ. ಬದಲಾಗಿ ನಮ್ಮ ತಂದೆಯೇ ಸತ್ತರೆ?! ನಾವು ಪೂರ್ಣ ಬಚಾವ್, ಅಲ್ಲವೇನೋ?"

* * *

**ಪೂ**ಜ್ಯ ಸ್ವಾಮಿ ಭೂತೇಶಾನಂದಜಿ ಮಹಾರಾಜರು ಗುಜರಾತಿನ ರಾಜಕೋಟ್ ಆಶ್ರಮದ ಅಧ್ಯಕ್ಷರಾಗಿದ್ದರು. ಆ ಕಾಲದಲ್ಲಿ ನಡೆದ ಒಂದು ಘಟನೆ ಹೀಗಿದೆ: ಸ್ವಾಮೀಜಿಯವರು ದಿನನಿತ್ಯವೂ ಬೆಳಿಗ್ಗೆ ವಾಯುವಿಹಾರಕ್ಕೆ ಹೋಗಿಬರುತ್ತಿದ್ದರು. ದಾರಿಯಲ್ಲಿ ಒಂದು ಶಿವಾಲಯವಿತ್ತು. ಅದರ ಹತ್ತಿರವೇ ಒಬ್ಬ ಸೇಟ್‌ಜಿ ಮನೆ. ಆ ಸೇಟ್‌ಜಿ ಸ್ವಾಮೀಜಿಯವರೊಡನೆ ಸ್ನೇಹ ಬೆಳೆಸಿದರು. ಕಾಲಕ್ರಮೇಣ ಹೋಗಿಬರುವುದು ರೂಢಿಯಾಗಿ ಹೋಯಿತು. ಸೇಟ್‌ಜಿ ಪ್ರತಿದಿನವೂ ಸ್ವಾಮೀಜಿಯವರಿಗೆ ಚಹಾ ನೀಡಲಾರಂಭಿಸಿದರು. ಅದೂ ಕೂಡ ಅಭ್ಯಾಸವಾಗಿ ಹೋಯಿತು. ಆ ಕಾಲದಲ್ಲಿ ರಾಜ್‌ಕೋಟ್ ಆಶ್ರಮದ ಆರ್ಥಿಕ ಪರಿಸ್ಥಿತಿ ತುಂಬ ಶೋಚನೀಯವಾಗಿತ್ತು. ಆಶ್ರಮ ನಡೆಸುವುದೇ ಕಷ್ಟವಾಗಿತ್ತು. ಸೇಟ್‌ಜಿಯವರು ಸ್ವಾಮಿ ಭೂತೇಶಾನಂದಜಿ ಅವರಿಗೆ ಬಹಳ ಶ್ರದ್ಧಾಭಕ್ತಿಗಳನ್ನು ತೋರಿಸುವುದನ್ನು ನೋಡಿ, ಅವರ ಒಬ್ಬ ಸಹಾಯಕ ಸ್ವಾಮಿಗಳು ಅವರಿಗೆ ಹೀಗೆ ವಿನಂತಿಸಿದರು: "ಮಹಾರಾಜ್, ಸೇಟ್‌ಜಿ ಬಹಳ ಶ್ರೀಮಂತರು. ಆಶ್ರಮಕ್ಕೆ ಸ್ವಲ್ಪ ಸಹಾಯ ಮಾಡಲು ನೀವು ಅವರಿಗೆ ಹೇಳಬಹುದಲ್ಲವೇ?" ಇದಕ್ಕೆ ಸ್ವಾಮಿ ಭೂತೇಶಾನಂದಜಿ ಬಹಳ ಗಂಭೀರ ಮುಖಭಾವದಿಂದ ಹೇಳಿದರು, "ಏನಪ್ಪ, ಈಗಲಾದರೂ ಒಂದು ಕಪ್ ಚಹವಾದರೂ ಸಿಕ್ಕುತ್ತಿದೆ. ಅದಕ್ಕೂ ಸಂಚಕಾರ ಹಾಕಲು ಹೊರಟಿದ್ದೀಯೇನು?"

* * *

**ಪೂ**ಜ್ಯ ಸ್ವಾಮಿ ಭೂತೇಶಾನಂದಜಿಯವರು ಮತ್ತೊಂದು ಕಥೆಯನ್ನು ಹೇಳುತ್ತಿದ್ದರು. ಅದು ಹೀಗಿದೆ: ಒಂದು ಕಾರ್ಖಾನೆ. ಅಲ್ಲಿಗೆ ಒಬ್ಬ ಗಣ್ಯ ವ್ಯಕ್ತಿ ಬಂದನು. "ಹರಿಹರ ಬಾಬುಗಳನ್ನು ನೋಡಬೇಕು" ಎಂದು ಕಾವಲುಗಾರನನ್ನು ಕೇಳಿಕೊಂಡನು. ಕಾವಲುಗಾರ ಮರುಪ್ರಶ್ನೆ ಹಾಕಿದ, "ತ್ರಿಪುರಾರಿ ಹರಿಹರ ಬಾಬುವೇ, ಇಲ್ಲಾ ಪರಮಾನಂದ ಹರಿಹರ ಬಾಬುವೇ?" ಆ ವ್ಯಕ್ತಿಗೆ ಏನೂ ಅರ್ಥವಾಗಲಿಲ್ಲ. ಪೆಚ್ಚುಮೋರೆ ಹಾಕಿಕೊಂಡು ಮುಖಮುಖ ನೋಡಿದ. ಅಲ್ಲಿಯೇ ಇದ್ದ ಕಾರ್ಮಿಕನೊಬ್ಬನು ಇದನ್ನು ನೋಡಿ ಅರ್ಥ ಮಾಡಿಕೊಂಡನು. ಅವನು ಹೀಗೆ ಹೇಳಿದನು: "ಇಲ್ಲಿ ಇಬ್ಬರು ಹರಿಹರ ಬಾಬುಗಳಿದ್ದಾರೆ. ತಾವು ಯಾರನ್ನು ಹುಡುಕುತ್ತಿದ್ದೀರಿ? ಕಾವಲುಗಾರನ ಭಾಷೆಯಲ್ಲಿ **ತ್ರಿಪುರಾರಿ** ಅಂದರೆ Temporary ಹರಿಹರ ಬಾಬು. **ಪರಮಾನಂದ** ಎಂದರೆ Permanent ಹರಿಹರ ಬಾಬು."

* * *

**ಒಂ**ದು ಸಲ ಒಬ್ಬ ರಾಜ ತನ್ನ ದರ್ಬಾರಿನವರ ಜೊತೆಗೆ ಕುಳಿತಿದ್ದ. ಆಗ ಅವನಿಗೆ ನರಿಗಳು ಊಳಿಡುವುದು ಕೇಳಿಸಿತು. ಆಗ ರಾಜ ತನ್ನ ಮಂತ್ರಿಗಳಿಗೆ ಕೇಳಿದ: "ಇವುಗಳು ಏಕೆ ಇಷ್ಟೊಂದು ಊಳಿಡುತ್ತಿವೆ?" ಮಂತ್ರಿ ಹೇಳಿದ, "ಅವುಗಳಿಗೆ ತುಂಬ ಚಳಿಯಾಗುತ್ತಿದೆ." ರಾಜ ಹೇಳಿದ, "ಅವುಗಳಿಗೆ ಒಂದಷ್ಟು ಕಂಬಳಿಗಳನ್ನು ತೆಗೆಸಿಕೊಡು." ಕಂಬಳಿಗಳನ್ನು ಕೊಂಡದ್ದೂ ಆಯಿತು. ಈಗ ಪುನಃ ನರಿಗಳು ಊಳಿಡುತ್ತಿದ್ದವು. ರಾಜ ಮತ್ತೆ ಕೇಳಿದ, "ಈಗ ಏಕೆ ನರಿಗಳು ಊಳಿಡುತ್ತಿವೆ?" ಅದಕ್ಕೆ ಸಭಿಕರು ಹೇಳಿದರು, "ಮಹಾರಾಜ, ಈಗ ಅವುಗಳು ನಿಮಗೆ ಅಭಿನಂದನೆಗಳನ್ನು ತಿಳಿಸುತ್ತಿವೆ." ಆಗ ಅಲ್ಲಿದ್ದ ಕೆಲವು ಮಕ್ಕಳು ಕೇಳಿದರು, "ಮಹಾರಾಜ, ಈ ಕಂಬಳಿಗಳು ನರಿಗಳಿಗೆ ಸಿಕ್ಕಿವೆಯೇನು?" ಮಹಾರಾಜ ನಕ್ಕು ಹೇಳಿದ, "ಏನೇ ಆಗಲಿ, ಆ ಲೆಕ್ಕದಲ್ಲಿ ಕಂಬಳಿಗಳನ್ನು ಕೊಂಡಾಯಿತು, ತಾನೆ?"

# ಬುದ್ಧ ಮರಳಿ ತಾಯ್ನಾಡಿಗೆ

ಸ್ವಾಮಿ ರಾಘವೇಶಾನಂದ

**(ಹಿಂದಿನ ಸಂಚಿಕೆಯಿಂದ)**

*(ಬುದ್ಧನು ತನ್ನ ತಂದೆಯಾದ ಶುದ್ಧೋಧನನ ಅರಮನೆಗೆ ಭೇಟಿಕೊಟ್ಟಿದ್ದಾನೆ. ಭಿಕ್ಷುಗಳ ಜೊತೆಗೂಡಿ ವಿಶೇಷ ಔತಣಕ್ಕೆ ಬರುವಂತೆ ನೀಡಿದ ಆಹ್ವಾನವನ್ನು ಒಪ್ಪಿಕೊಂಡಿದ್ದಾನೆ. ಜನಗಳೆಲ್ಲ ಆ ಔತಣದ ದಿನವನ್ನೇ ಕಾತರದಿಂದ ಕಾಯುತ್ತಿದ್ದಾರೆ.)*

**ಮ**ಹಾರಾಜನು ಈ ಮಧ್ಯೆ ಹಲವು ಬಾರಿ ನ್ಯಗ್ರೋಧವನಕ್ಕೆ ಭೇಟಿಕೊಟ್ಟು ಬುದ್ಧನ ಉಪದೇಶಗಳನ್ನು ಆಲಿಸಿದನು. ಗೌತಮಿ ಮತ್ತು ಯಶೋಧರೆಗೂ ಅಲ್ಲಿಗೆ ಹೋಗುವ ಇಚ್ಛೆಯಿತ್ತು. ಆದರೆ ಭಿಕ್ಷುಗಳನ್ನು ಅರಮನೆಗೆ ಸ್ವಾಗತಿಸುವ ಏರ್ಪಾಡು ಮಾಡುವ ಭರದಲ್ಲಿ ಸಮಯವೇ ಸಿಗಲಿಲ್ಲ. ಬರುವ ಭಿಕ್ಷುಗಳಿಗೆ ಯಾವ ಯಾವ ಭಕ್ಷ್ಯಗಳನ್ನು ಮಾಡಬೇಕು ಎನ್ನುವ ಚರ್ಚೆ ಬಿರುಸಾಗಿ ಅಂತಃಪುರದಲ್ಲಿ ಸಾಗುತ್ತಿತ್ತು.



ಯುವರಾಜ ನಂದನು ಎರಡು ಬಾರಿ ಬುದ್ಧನನ್ನು ಭೇಟಿಮಾಡಿದನು. ಬುದ್ಧನ ಜ್ಞಾನೋಪದೇಶವು ನಡೆದಾಗಲೆಲ್ಲ ತಾನು ಕೂಡ ಅದನ್ನು ಆಲಿಸುತ್ತಿದ್ದನು. ಭಿಕ್ಷುವಿನ ಶಾಂತ ಜೀವನದೆಡೆಗೆ ಅವನು ಆಕರ್ಷಿತನಾದನು. ಒಮ್ಮೆ ಬುದ್ಧನನ್ನು ಕುರಿತು ನಂದನು, "ಅಣ್ಣಾ, ನಾನು ಭಿಕ್ಷುವಾಗಲು ಅರ್ಹನೇ?" ಎಂದು ಕೇಳಿದನು. ನಂದನು ಒಳ್ಳೆಯ ವ್ಯಕ್ತಿ. ಆದರೆ ಅವನ ಮನಸ್ಸಿನಲ್ಲಿ ದೃಢಸಂಕಲ್ಪ ಇರಲಿಲ್ಲ. ಇದನ್ನು ಗಮನಿಸಿದ ಬುದ್ಧನು ಸುಮ್ಮನೆ ಮುಗುಳ್ನಕ್ಕನು. ಬುದ್ಧನ ಜೊತೆ ಇದ್ದಾಗ ನಂದನಿಗೆ ಭಿಕ್ಷುವಾಗುವ ಆಸೆಯಾಗುತ್ತಿತ್ತು. ಆದರೆ ಅರಮನೆಗೆ ಹಿಂದಿರುಗುವಾಗ ಅವನ ಕಣ್ಣು ಮತ್ತು ಮನಸ್ಸುಗಳು ಅಲ್ಲಿಯ ಭೋಗವಸ್ತುಗಳೆಡೆಗೆ ಆಕರ್ಷಿತವಾಗುತ್ತಿದ್ದವು.

ಕೊನೆಗೂ ಆ ಸಂಭ್ರಮದ ದಿನ ಬಂದೇಬಿಟ್ಟಿತು. ಮಹಾರಾಜನು ಅಂದು ಔತಣಕ್ಕೆ ಹಾಗೂ ಬುದ್ಧನ ಅಂದಿನ ವಿಶೇಷ ಪ್ರವಚನಕ್ಕೆ ನಗರದ ಎಲ್ಲ ಗಣ್ಯರೂ ಸೇರಿದಂತೆ, ಸಾವಿರಾರು ಅತಿಥಿಗಳನ್ನು ಆಹ್ವಾನಿಸಿದ್ದನು. ಇಡೀ ನಗರ ಮತ್ತು ಅರಮನೆಯು ತೋರಣ, ಹೂಮಾಲೆಗಳಿಂದ ಬುದ್ಧ ಮತ್ತು ಅವನ ಸಂಘದ ಭಿಕ್ಷುಗಳನ್ನು ಸ್ವಾಗತಿಸಲು ಸಜ್ಜಾಗಿ ನಿಂತಿತ್ತು. ಸಂಗೀತಗಾರರು ಸುಮಧುರವಾದ ಸಂಗೀತವನ್ನು ಹಾಡುತ್ತಿದ್ದರು. ನಾಗರಿಕರೆಲ್ಲ ರಸ್ತೆಯ ಬದಿಯಲ್ಲಿ ಸಾಲುಗಟ್ಟಿ ನಿಂತಿದ್ದರು. ಬುದ್ಧ ಮತ್ತು ಅವನ ಅನುಯಾಯಿಗಳು ಶಾಂತವಾಗಿ, ನಿಧಾನವಾಗಿ ಜನರ ಮಧ್ಯೆ ನಡೆದುಬರುತ್ತಿದ್ದರು. ಅವರ ಕಣ್ಣುಗಳು ಹೊರಗಿನ ಪರಿವೆಯೇ ಇಲ್ಲದೆ, ಅಂತರ್ಮುಖವಾಗಿದ್ದವು. ಜನಜಂಗುಳಿಯ, ವಾದ್ಯಘೋಷಗಳ ಸದ್ದುಗಳ ನಡುವೆ ಅವರು ನಡೆಯುತ್ತಿದ್ದರೂ, ಅವರ ನಡಿಗೆಯು ಏಕಾಂತದ ಮತ್ತು ಸಂಯಮದ ನಡಿಗೆಯಾಗಿತ್ತು. ಅರಮನೆಯ ಬಾಗಿಲಿನಲ್ಲಿ ಶುದ್ಧೋಧನನು ಕೈಜೋಡಿಸಿ ನಿಂತಿದ್ದನು. ಬುದ್ಧನನ್ನೂ ಮತ್ತು ಉಳಿದ ಭಿಕ್ಷುಗಳನ್ನೂ ಸ್ವಾಗತಿಸಲಾಯಿತು. ಬುದ್ಧನನ್ನು ಕಂಡು ಇಡೀ ಪರಿವಾರವೇ ಕೈಜೋಡಿಸಿ ನಿಂತಿದ್ದಿತು. ಮಹಾರಾಜನು ಬುದ್ಧನಿಗೆ ವಂದಿಸುವುದನ್ನು ಕಂಡು ಹಲವಾರು ಜನರು ಅಚ್ಚರಿಪಡುತ್ತಿದ್ದರು.

ಬುದ್ಧ ಮತ್ತು ಇತರ ಭಿಕ್ಷುಗಳು ಊಟದ ಮೇಜಿನ ಮುಂದೆ ಕುಳಿತರು. ರಾಜ ಶುದ್ಧೋಧನನು ಬುದ್ಧನಿಗೆ ತಾನೇ ಸ್ವತಃ ಊಟ ಬಡಿಸಲು ಮುಂದೆ ಬಂದನು. ಹಾಗೆಯೇ ಯಶೋಧರೆ ಮತ್ತಿತರರು ಬುದ್ಧನ ಅನುಯಾಯಿಗಳಿಗೆ ಊಟ ಬಡಿಸಲು ಸಿದ್ಧರಾದರು. ಮೇಜಿನ ಮೇಲೆ ಬೆಳ್ಳಿಯ ಪಾತ್ರೆಗಳನ್ನು ಸಜ್ಜುಗೊಳಿಸಿದ್ದರೂ ಕೂಡ, ಬುದ್ಧ ಮತ್ತು ಅವನ ಅನುಯಾಯಿಗಳು ತಮ್ಮ ಭಿಕ್ಷಾಪಾತ್ರೆಗಳನ್ನೇ ಮುಂದೊಡ್ಡಿದರು. ಅಲ್ಲಿದ್ದ ನೂರಾರು ಭಕ್ಷ್ಯಗಳನ್ನು ಅವುಗಳಲ್ಲಿ ಬಡಿಸುವುದಾದರೂ ಹೇಗೆ? ನಿರಾಶೆಯಿಂದ ಭಿಕ್ಷಾಪಾತ್ರೆಗಳಲ್ಲಿ ಹಿಡಿಸುವಷ್ಟು ಬಡಿಸಿದರು. ಸದ್ಯ, ಉಳಿದ ಅತಿಥಿಗಳಿಗೆ ಬೇರೆ ಕಡೆ ವ್ಯವಸ್ಥೆ ಇತ್ತು. ಅವರೆಲ್ಲ, ಹೊಟ್ಟೆ ತುಂಬ ಊಟ ಮಾಡಿ ತೃಪ್ತರಾದರು. ಬುದ್ಧ ಮತ್ತು ಅವನ ಅನುಯಾಯಿಗಳು ಮೌನವಾಗಿ ಊಟ ಮಾಡಿದರು. ನಂತರ ತಮ್ಮ ಭಿಕ್ಷಾಪಾತ್ರೆಗಳನ್ನು ತಾವೇ ತೊಳೆದುಕೊಂಡರು.

ಆಮೇಲೆ ಅವರೆಲ್ಲ ಅರಮನೆ ಮುಂದಿನ ತೋಟದಲ್ಲಿ ಕುಳಿತರು. ಬುದ್ಧನು ಧರ್ಮಬೋಧನೆಗೆ ಸಿದ್ಧನಾಗಿದ್ದ. ಎತ್ತರದ ಆಸನದ ಮೇಲೆ ಎಲ್ಲರಿಗೂ ಕಾಣುವಂತೆ ಕುಳಿತ. ಮುಂದಿನ ಸಾಲುಗಳಲ್ಲಿ ಅವನ ಅನುಯಾಯಿಗಳು ಅವನ ಎದುರಾಗಿ ಕುಳಿತರು. ಉಳಿದ ಅತಿಥಿಗಳೂ ಬೇಗ ಬೇಗ ಊಟ ಮುಗಿಸಿ ಬಂದು ಹಿಂದಿನ ಸಾಲುಗಳಲ್ಲಿ ಕುಳಿತರು. ಬುದ್ಧನ ಮುಖದಲ್ಲಿ ಪ್ರಶಾಂತತೆ ಆವರಿಸಿತ್ತು. ರಾಜ ಶುದ್ಧೋಧನ ಭಕ್ತಿಯಿಂದ ಕೈಮುಗಿದು, ಧರ್ಮದ ಬಗ್ಗೆ ಬೋಧಿಸುವಂತೆ ಬುದ್ಧನನ್ನು ಪ್ರಾರ್ಥಿಸಿಕೊಂಡ. ಬುದ್ಧನ ಪಕ್ಕದಲ್ಲಿಯೇ ಸಜ್ಜಾಗಿದ್ದ ಸರಳವಾದ ಆಸನದಲ್ಲಿ ಅವನೂ ಕುಳಿತ. ಅಂತಃಪುರದ ಸ್ತ್ರೀಯರೆಲ್ಲ ಒಂದು ಕಡೆ ಕುಳಿತಿದ್ದರು.